## ಮೂರನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಸಾರಾಂಶ

ಶ್ರೀ ಎ.ಜಿ.ಕೊಡ್ಗಿ ನೇತೃತ್ವದ ಮೂರನೇ ಹಣಕಾಸು ಆಯೋಗದ ವರದಿಯ ಆಯ್ದ ಭಾಗ

**1. ಗ್ರಾಮ ಪಂಚಾಯತ್‌ಗಳ ಬಗ್ಗೆ ಆಯೋಗದ ಶಿಫಾರಸ್ಸುಗಳು (ಅಧ್ಯಾಯ -5)**

1. ಅರ್ಹ ಪ್ರಕರಣಗಳಲ್ಲಿ ಮೃತ ವ್ಯಕ್ತಿಯ ಶವಸಂಸ್ಕಾರಕ್ಕೆ ಕುಟುಂಬ ವರ್ಗದವರಿಗೆ ನೀಡುವ ಸಹಾಯ ಧನವನ್ನು ವಿತರಿಸುವ ಅಧಿಕಾರವನ್ನು ಕಂದಾಯ ಇಲಾಖೆಯಿಂದ ಹಿಂಪಡೆದು ಗ್ರಾಮ ಪಂಚಾಯತಿಗೆ ನೀಡುವುದು.
7. ಗ್ರಾಮ ಪಂಚಾಯತ್ ಸಿಬ್ಬಂದಿಗಳ ನೇಮಕಕ್ಕೆ ವ್ಯವಸ್ಥಿತವಾದ ನಿಯಮಾವಳಿಗಳನ್ನು ರೂಪಿಸಬೇಕು.
11. ಪಂಚಾಯತ್‌ಗಳ ಕಾಮಗಾರಿಗಳ ಸಮಗ್ರ ನಿರ್ವಹಣೆಗೆ ಅಗತ್ಯವುಳ್ಳ ತಾಂತ್ರಿಕ ಸಿಬ್ಬಂದಿಯನ್ನು ಒದಗಿಸಬೇಕು ಹಾಗೂ ಕಳಪೆ ಕಾಮಗಾರಿಗಳಿಗೆ ತಾಂತ್ರಿಕ ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡಬೇಕು.
12. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆಯಬಹುದಾದ ಹಾಗೂ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟಲು ಸ್ವತಂತ್ರವಾದ ಒಂಬಡ್ಸ್‌ಮೆನ್ ವ್ಯವಸ್ಥೆ ರಚಿಸಬೇಕು.
1. ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮುಂತಾದ ಇಲಾಖೆಗಳ ಸಿಬ್ಬಂದಿ ಮತ್ತು ಕಾರ್ಯನಿರ್ವಹಣೆಯನ್ನು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಜೋಡಣೆ ಮಾಡುವುದು. ಇಂತಹ ಎಲ್ಲಾ ಸೇವೆಗಳನ್ನು ಏಕಗವಾಕ್ಷಿ ಪದ್ಧತಿಯಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವುದು.

**ಗ್ರಾಮ ಪಂಚಾಯತಿಗಳ ಲೆಕ್ಕ ಪತ್ರಗಳ ತಪಾಸಣೆ (4.29)**

1. ಪ್ರತಿ ಗ್ರಾಮ ಪಂಚಾಯತಿಗೆ ಒಂದು ಲೆಕ್ಕಪತ್ರ ಸಹಾಯಕರ ಹುದ್ದೆಯನ್ನು ಸೃಜಿಸಿ ಭರ್ತಿ ಮಾಡುವುದು ಸೂಕ್ತ. ಗ್ರಾಮ ಪಂಚಾಯತಿಗಳಿಗೆ ಈಗ ಗಣಕ ಯಂತ್ರಗಳನ್ನು ಒದಗಿಸುತ್ತಿರುವುದರಿಂದ ಹಣಕಾಸಿನ ವ್ಯವಹಾರಗಳನ್ನು ತಾಲೂಕು ಕೇಂದ್ರಕ್ಕೆ ಓನ್‌ಲೈನ್ ವ್ಯವಸ್ಥೆ ಮಾಡಿ ತಾಲೂಕು ಪಂಚಾಯತಿಯ ಲೆಕ್ಕಪತ್ರಗಳ ಶಾಖೆಯು ಪ್ರತಿನಿತ್ಯ ಮೇಲ್ವಿಚಾರಣೆ ನಡೆಸುವುದು ಅಗತ್ಯ. ಸಾವಿರಾರು ಕೋಟಿ ಸಾರ್ವಜನಿಕ ಹಣ ಖರ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಸಹಕಾರ ಇಲಾಖೆಯಲ್ಲಿರುವಂತೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ಒಂದು ಪ್ರತ್ಯೇಕ ಲೆಕ್ಕ ತಪಾಸಣೆ (ಆಡಿಟ್) ವಿಭಾಗವನ್ನು ಪರಿಣಿತಿಯುಳ್ಳ ಅಧಿಕಾರಿ ಹಾಗೂ ಸಿಬ್ಬಂದಿಯವರನ್ನು ಒಳಗೊಂಡಂತೆ ಸ್ಥಾಪಿಸುವುದು ಅತ್ಯಗತ್ಯ. ಕಳೆದ ಹತ್ತು ವರ್ಷಗಳಿಂದ ರಾಜ್ಯದ ಗ್ರಾಮ ಪಂಚಾಯತ್‌ಗಳ ಲೆಕ್ಕಪತ್ರಗಳ ಪರಿಶೀಲನಾ ವಿವರಗಳನ್ನು ಪರಿವೀಕ್ಷಣೆಗೆ ಒಳಪಡಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

**ಗ್ರಾಮ ಪಂಚಾಯತ್‌ಗಳಲ್ಲಿ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ರಕ್ಷಣೆ (5.5)**

2. ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ಹಾಗೂ ಸಂಚಿತ ವೇತನ ನೌಕರರಿಗೆ ಸೂಕ್ತ ವೇತನ ಭದ್ರತೆ ಒದಗಿಸಿ ಸರ್ಕಾರದ ಕಾರ್ಮಿಕ ಸಚಿವಾಲಯವು ದಿನಾಂಕ 24-4-2008ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ಕನಿಷ್ಟ ವೇತನ ಜಾರಿಗೊಳಸಬೇಕೆಂದು ಆಯೋಗವು ಶಿಫಾರಸ್ಸು ಮಾಡುತ್ತದೆ.

**5. ತಾಲೂಕು ಪಂಚಾಯತಿಗಳ ಬಗ್ಗೆ ಆಯೋಗದ ಶಿಫಾರಸ್ಸುಗಳು (ಅಧ್ಯಾಯ – 7)**

2.ಸಂವಿಧಾನಭದ್ದವಾಗಿ ಕಾನೂನಿನ ನಿಯಮಾನುಸಾರ ವಹಿಸಿರುವ ಕಾಮಗಾರಿಗಳನ್ನು ಸಮಗ್ರವಾಗಿ ನಿರ್ವಹಿಸುವ ಸ್ವತಂತ್ರ ಹೊಣೆ ಹಾಗೂ ಜವಾಬ್ದಾರಿ ತಾಲೂಕು ಪಂಚಾಯತ್‌ಗಳಿಗೆ ಇರಬೇಕು.

10.ಕೇಂದ್ರ ಹಣಕಾಸು ಆಯೋಗದಿಂದ ಬಿಡುಗಡೆಯಾದ ಅನುದಾನಗಳನ್ನು ಆಯೋಗದ ಸೂಚನೆಯಂತೆ ಬಳಸಿಕೊಳ್ಳುವ ಸಂಪೂರ್ಣ ಅಧಿಕಾರ ತಾಲೂಕು ಪಂಚಾಯತ್‌ಗಳಿಗೆ ಇರಬೇಕು.

**6. ಜಿಲ್ಲಾ ಪಂಚಾಯತ್‌ಗಳ ಬಗ್ಗೆ ಆಯೋಗದ ಸಲಹೆ ಮತ್ತು ಶಿಫಾರಸ್ಸುಗಳು (ಅಧ್ಯಾಯ -10)**

3. ಜಿಲ್ಲಾ ಪಂಚಾಯತ್ ಕಾಮಗಾರಿಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸುವ ಕಾಮಗಾರಿಗಳ ಅನುಷ್ಠಾನದ ಆಧ್ಯತೆಯನ್ನು ನಿಗದಿಪಡಿಸುವ ಹಾಗೂ ಅನುಷ್ಠಾನಗೊಳಿಸುವ ಹಕ್ಕು, ಜವಾಬ್ದಾರಿ ಸಂಪೂರ್ಣ ಜಿಲ್ಲಾ ಪಂಚಾಯತಿಗಳಿಗಿರಬೇಕು.

5. ಕೇಂದ್ರ ಹಣಕಾಸು ಆಯೋಗದಿಂದ ಬಿಡುಗಡೆ ಮಾಡುವ ಅನುದಾನವನ್ನು ಆಯೋಗದ ಸಲಹೆಯಂತೆ ಖರ್ಚು ಮಾಡುವ ಸ್ವತಂತ್ರ ಹಕ್ಕು ಜಿಲ್ಲಾ ಪಂಚಾಯತಿಗಳಿಗಿರಬೇಕು.

14. ರಾಜ್ಯದಿಂದ ಜಿಲ್ಲೆಯ ಅಭಿವೃದ್ಧಿಗಳಿಗೆ ಪೂರಕವಾಗಿ ಅನುದಾನಗಳನ್ನು ಬೇರೆ ಬೇರೆಯಾಗಿ ನಿಗಮ ಮಂಡಳಿಗಳ ಮುಖಾಂತರ ಬಿಡುಗಡೆ ಮಾಡುವುದನ್ನು ನಿಲ್ಲಿಸಬೇಕು ಮತ್ತು ಎಲ್ಲಾ ಹಣವನ್ನು ಜಿಲ್ಲಾ ಪಂಚಾಯತ್‌ಗಳ ಮುಖಾಂತರವೇ ಬಿಡುಗಡೆ ಮಾಡಬೇಕು.

**7. ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ಆಯೋಗದ ಶಿಫಾರಸ್ಸುಗಳು (ಅಧ್ಯಾಯ -10)**

11. 64 ತಾಲೂಕು ಪಂಚಾಯತಿಗಳಲ್ಲಿ ಮಾತ್ರ ತಾಲೂಕು ಯೋಜನಾಧಿಕಾರಿಗಳನ್ನು ನೇಮಿಸಿದ್ದು ಉಳಿದ ತಾಲೂಕುಗಳಿಗೂ ಈ ಹುದ್ದೆಯನ್ನು ಸೃಜಿಸಿ, ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳ ಯೋಜನೆಗಳ ನಿರೂಪಣೆ, ಅನುಷ್ಠಾನ ಉಸ್ತುವಾರಿ, ಮೌಲ್ಯಮಾಪನ ಕಾರ್ಯಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವುದು. ಗ್ರಾಮಗಳ ಮೂಲ ಅಂಕಿ-ಅಂಶಗಳ ಸಂಗ್ರಹಣೆ, ಕ್ರೋಢೀಕರಣದ ಉಸ್ತುವಾರಿಯನ್ನು ವಹಿಸುವುದು.

15. ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಗದಿಪಡಿಸಿದ ಕಾರ್ಯಗಳನ್ನು ಪರಿಷ್ಕರಿಸಿ, ಚಟುವಟಿಕೆ ನಕೆಯನ್ನು ಪರಿಷ್ಕರಿಸುವುದರೊಂದಿಗೆ ಪಂಚಾಯತಿಗಳನ್ನು ಬಲಪಡಿಸುವುದು.

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯಚಟುವಟಿಕೆ ನಕ್ಷೆ (ಅಧ್ಯಾಯ – 14)ಯಲ್ಲಿ ಸೂಚಿಸಿದ ಹಂಚಿಕೆಗಳನ್ನು ಅನುಷ್ಠಾನಗೊಳಿಸುವುದು.**

**ಪ್ರತ್ಯೇಕ ನಿರ್ದೇಶನಾಲಯದ ಅವಶ್ಯಕತೆ**

26. ಗ್ರಾಮೀಣಾಭಿವೃದ್ಧಿಯಂತಹ ಪ್ರಗತಿಪರ ಸಂಕೀರ್ಣ ಪರಿಕಲ್ಪನೆಯುಳ್ಳ ಇಲಾಖೆಗೆ ತನ್ನದೇ ಆದ ನಿರ್ದೇಶನಾಲಯವನ್ನು ರಚಿಸಿ ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಆಯುಕ್ತರನ್ನಾಗಿ ನೇಮಿಸುವುದು ಸೂಕ್ತ. ಇವರ ಸಹಾಯಕರಾಗಿ ಅಪರ ಆಯುಕ್ತರು ಮತ್ತು ಜಂಟಿ ಆಯುಕ್ತರುಗಳ ಹುದ್ದೆಗಳನ್ನು ರಚಿಸಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಪದೋನ್ನತಿ ಪಡೆದ ಹಿರಿಯ ಶ್ರೇಣಿಯ ಉನ್ನತ ಅಧಿಕಾರಿಗಳನ್ನು ಈ ಹುದ್ದೆಗಳಿಗೆ ನೇಮಿಸುವುದು. ಈ ನಿರ್ದೇಶನಾಲಯವು ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಆಡಿಟ್ ಹಾಗೂ ಕಾಯ್ದೆ ಬದ್ಧ ಅನುಸರಣಾ ಕ್ರಮಗಳ ನೇರ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕಾರ್ಯ ನಿರ್ವಹಿಸುವುದು ಅವಶ್ಯಕ. (17.9)

**ಓಂಬುಟ್ಸ್‌ಮನ್ ವ್ಯವಸ್ಥೆ ಜಾರಿಗೆ ತರುವುದು (ಅಧ್ಯಾಯ – 18)**

28. ಕಾಮಗಾರಿಗಳ ಅನುಷ್ಠಾನದಲ್ಲಿ ಮತ್ತು ಕಾರ್ಯವಿಧಾನದಲ್ಲಿ ಲೋಪದೋಷಗಳು ಕಂಡುಬಂದಾಗ ಅವುಗಳ ಬಗ್ಗೆ ವಿಚಾರಣೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲು ಪಂಚಾಯತ್ ರಾಜ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟಾರೆ ಕಾರ್ಯ ವ್ಯಾಪ್ತಿಯುಳ್ಳ ಓಂಬುಡ್ಸ್‌ಮನ್ ವ್ಯವಸ್ಥೆಯನ್ನು ಕರ್ನಾಟಕದಲ್ಲೂ ಜಾರಿಗೊಳಿಸಬಹುದು. ಈ ಓಂಬುಡ್ಸ್‌ಮನ್ ಈ ಕೆಳಕಂಡ ಅಂಶಗಳನ್ನು ಒಳಗೊಳ್ಳಬಹುದಾಗಿದೆ.

1. ವಿಭಾಗಮಟ್ಟದಲ್ಲಿ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಓಂಬುಡ್ಸ್‌ಮನ್‌ರವರನ್ನಾಗಿ ನೇಮಕ ಮಾಡಬಹುದು ಹಾಗೂ ಇವರು ಜಿಲ್ಲಾ ಪಂಚಾಯತ್ ಹಾಗೂ ನಗರಪಾಲಿಕೆ ಮತ್ತು ನಗರ ಸಭೆಗಳ ವಿಚಾರಗಳನ್ನು ನೋಡಿಕೊಳ್ಳಬಹುದು.

2. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳನ್ನು ಓಂಬುಡ್ಸ್‌ಮನ್‌ರಾಗಿ ನೇಮಿಸಿ ತಾಲೂಕು ಪಂಚಾಯತ್ ಹಾಗೂ ಪುರಸಭೆಗಳ ವಿಚಾರಗಳನ್ನು ವಹಿಸಬಹುದು.

3.ಕಂದಾಯ ಉಪವಿಭಾಗಾಧಿಕಾರಿಗಳನ್ನು ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್‌ಗಳ ಓಂಬುಡ್ಸ್‌ಮನ್‌ರಾಗಿ ನೇಮಿಸಬಹುದು.

4. ಇವರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಇರಬೇಕು.

5. ಇವರಿಗೆ ನ್ಯಾಯಾಧಿಕರಣದ ಅಧಿಕಾರ ಕೊಡಬೇಕು.

6. ಇವರ ಅಧೀನದಲ್ಲಿ ಸೂಕ್ತ ಆಡಳಿತಾತ್ಮಕ, ಲೆಕ್ಕಪತ್ರ ಮತ್ತು ತಾಂತ್ರಿಕ ಸಿಬ್ಬಂದಿಯ ತಂಡವನ್ನು ಒದಗಿಸಬೇಕು.

7. ಇವರ ಕಾರ್ಯ ವಿಧಾನವನ್ನು ಸ್ಪಷ್ಟಪಡಿಸಿ ಖರ್ಚುವೆಚ್ಚಗಳಿಗೆ ಅಗತ್ಯ ಅನುದಾನವನ್ನು ನಿಗದಿತವಾಗಿ ಒದಗಿಸುವುದು.

8. ಇವರ ತೀರ್ಮಾನಗಳನ್ನು ಜಾರಿಗೊಳಿಸುವ ಸೂಕ್ತ ವ್ಯವಸ್ಥೆ ಮತ್ತು ಕಾರ್ಯವಿಧಾನವನ್ನು ರೂಪಿಸುವುದು.

**ನಾಗರಿಕ ಸನ್ನದು ಜಾರಿಗೆಗೊಳಿಸುವುದು (19.5)**

31. ರಾಜ್ಯಾದ್ಯಂತ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ನಾಗರಿಕ ಸನ್ನದು ಪ್ರಕಟಿಸಿ ಈ ಕೆಳಕಂಡ ವಿಷಯಗಳು ಮತ್ತು ವಿಧಾನಗಳನ್ನು ಅನುಸರಿಸುವಂತೆ ಆಯೋಗವು ಶಿಫಾರಸ್ಸು ಮಾಡುತ್ತದೆ.
1. ಆ ಸಂಸ್ಥೆಯಿಂದ ಆ ವರ್ಷ ಮಾಡಬಹುದಾದ ಕಾರ್ಯಕ್ರಮಗಳು ಮತ್ತು ಜಾರಿಗೊಳಿಸಬಹುದಾದ ಯೋಜನೆಗಳು
2. ಈ ಯೋಜನೆಗಳಿಗೆ ಆ ಸಾಲಿನಲ್ಲಿ ಒದಗಿಸುವ ಹಣಕಾಸು.
3. ಪಂಚಾಯತ್ ರಾಜ್ ವಿವಿಧ ಇಲಾಖೆಗಳ ಮೂಲಕ ಒದಗಿಸಬಹುದಾದ ಪ್ರಯೋಜನಗಳು
4. ಈ ಸಂಸ್ಥೆಯ ಕ್ರಿಯಾ ಯೋಜನೆ ಮತ್ತು ಅವುಗಳನ್ನು ಜಾರಿಗುಳಿಸುವ ವಿಧಾನ.
5. ಈ ಬಗ್ಗೆ ಕೈಗೊಳ್ಳಬಹುದಾದ ಕ್ರಮಗಳು
6. ಪ್ರತಿ ತಿಂಗಳು ನಿಗದಿತ ದಿನದಂದು (ಪ್ರತಿ ಮೂರನೇ ಶನಿವಾರ) ಆಯಾ ಕ್ಷೇತ್ರದ ಜನ ಪ್ರತಿನಿಧಿಗಳನ್ನೊಳಗೊಂಡಂತೆ ನಾಗರಿಕರ ಸಭೆ ಕರೆದು ಚರ್ಚಿಸಿ ಸಂಸ್ಥೆಯ ಕಾರ್ಯಕ್ರಮಗಳ ಬಗ್ಗೆ ಸಲಹೆ ಅಭಿಪ್ರಾಯ ಕೇಳುವುದು.
7. ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವಂತೆ ಅನುಸರಣಾ ಕ್ರಮ ಜರುಗಿಸುವುದು.
8. ಇಂತಹ ಸಭೆಗಳ ಕಾರ್ಯಕ್ರಮ ಪಟ್ಟಿ ತಯಾರಿಸಿ ಮುಂಚಿತವಾಗಿ ಪ್ರಚಾರಪಡಿಸಿ ಜನ ಆಸಕ್ತಿಯಿಂದ ಭಾಗವಹಿಸುವಂತೆ ಮಾಡುವುದು.
9. ಸಾಧ್ಯವಾದಲ್ಲಿ ಕ್ಷೇತ್ರದ ಶಾಸಕರು, ಲೋಕಸಭಾ ಸದಸ್ಯರನ್ನು ವಿಶೇಷ ಆಹ್ವಾನಿತರಾಗಿ ಕರೆಯುವುದು.
10. ಸಂಬಂಧಿಸಿದ ಹಿರಿಯ ಅಧಿಕಾರಿಗಳು ಈ ಸಭೆಯಲ್ಲಿ ಸಕ್ರೀಯವಾಗಿ ಭಾಗವಹಿಸುವಂತಿರಬೇಕು.

**ಧನವಿನಿಯೋಗದ ಬಗ್ಗೆ ಆಯೋಗದ ಶಿಫಾರಸ್ಸುಗಳು (ಅಧ್ಯಾಯ – 28)**
**ವೇತನಕ್ಕೆ ಪ್ರತ್ಯೇಕ ಧನ ವಿನಿಯೋಗದ ಭಾಗ**

51.ವೇತನ ಮತ್ತು ವೇತನದ ಬಾಕಿ ಪಾವತಿಸಲು ಯಾವುದೇ ತರಹದ ಸೂಚಕ ಮತ್ತು ಕೃಪಾಂಕಗಳನ್ನು ಬಳಸಿ ಪಂಚಾಯತ್ ರಾಜ್ ಸಂಸ್ಥೆಗಳ ಪಾಲನ್ನು ನಿರ್ಧರಿಸುವುದು ಅಸಮಂಜಸ ಮತ್ತು ಅನುಚಿತ ಎಂದು ಆಯೋಗವು ಅಭಿಪ್ರಾಯಪಟ್ಟಿರುತ್ತದೆ. ಈ ಸನ್ನಿವೇಶದ ಪ್ರಯುಕ್ತ, ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವಂತಹವರ ವೇತನದ ಭಾಗವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರದ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ಪಾಲನ್ನು ಲೆಕ್ಕ ಮಾಡುವ ಮುಂಚೆ ಪ್ರತ್ಯೇಕಗೊಳಿಸಬೇಕೆಂದು ಆಯೋಗವು ಶಿಫಾರಸ್ಸು ಮಾಡುತ್ತದೆ. (28.13)

**ಶಾಸನಬದ್ಧ ಅಭಿವೃದ್ಧಿ ಅನುದಾನಗಳು**

55. ಆಯೋಗವು 3 ಪ್ರವರ್ಗಗಳಿಗೆ ಶಾಸನಬದ್ಧ ಅಭಿವೃದ್ಧಿ ಅನುದಾನಗಳ ಹಂಚಿಕೆಯನ್ನು ಈ ಕೆಳಗಿನಂತೆ ಮಾಡಲು ಶಿಫಾರಸ್ಸು ಮಾಡುತ್ತದೆ. (28.24)

– ಪ್ರವರ್ಗ–I - ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿವರ್ಷಕ್ಕೆ ರೂ. 9.00 ಲಕ್ಷಗಳು.

– ಪ್ರವರ್ಗ–II - ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿವರ್ಷಕ್ಕೆ ರೂ. 12.00 ಲಕ್ಷಗಳು.

– ಪ್ರವರ್ಗ–III - ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿವರ್ಷಕ್ಕೆ ರೂ. 15.00 ಲಕ್ಷಗಳು.

**ಹಿಂದುಳಿದ ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚುವರಿ ಶಾಸನಬದ್ಧ ಅಭಿವೃದ್ಧಿ ಅನುದಾನಗಳು (28.25)**

58. ಆಯೋಗವು ಮೂರು ಪ್ರವರ್ಗಗಳಲ್ಲಿನ ಹಿಂದುಳಿದ ತಾಲೂಕುಗಳಲ್ಲಿರುವ ಗ್ರಾಮ ಪಂಚಾಯತ್‌ಗಳಿಗೆ ಶಾಸನಬದ್ಧ ಅಭಿವೃದ್ಧಿ ಅನುದಾನಗಳ ಜೊತೆಗೆ ಈ ಹೆಚ್ಚುವರಿ ಅನುದಾನವನ್ನು ಕೆಳಗಿನಂತೆ ಹಂಚಲು ಶಿಫಾರಸ್ಸು ಮಾಡುತ್ತದೆ.

- "ಹಿಂದುಳಿದ ತಾಲೂಕು"ಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತ್‌ಗಳೂ ರೂ. 1.00 ಲಕ್ಷ ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿ ವರ್ಷಕ್ಕೆ
- "ಹೆಚ್ಚು ಹಿಂದುಳಿದ ತಾಲೂಕು" ಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತ್‌ಗಳೂ ರೂ. 2.00 ಲಕ್ಷ ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿ ವರ್ಷಕ್ಕೆ
- "ಅತಿ ಹಿಂದುಳಿದ ತಾಲೂಕು" ಗಳಲ್ಲಿರುವ ಎಲ್ಲಾ ಗ್ರಾಮ ಪಂಚಾಯತ್‌ಗಳೂ ರೂ. 3.00 ಲಕ್ಷ ಪ್ರತಿ ಗ್ರಾಮ ಪಂಚಾಯತ್‌ಗೆ ಪ್ರತಿ ವರ್ಷಕ್ಕೆ.